# ಕರ್ನಾಟಕ ವಿಧಾನ ಪರಿಷತ್ತು

**ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಅ. ದೇವೇಗೌಡ (ಪದವೀಧರರ ಕ್ಷೇತ್ರ)**
**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 167 (323)**
**ಉತ್ತರಿಸುವ ಸಚಿವರು : ಕಂದಾಯ ಸಚಿವರು.**
**ಉತ್ತರಿಸುವ ದಿನಾಂಕ : 06.12.2023.**

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| **ಅ)** | ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿನಲ್ಲಿ ನಾಡಪ್ರಭು ಕೆಂಪೇಗೌಡ ಸಮಾಧಿ ಸ್ಥಳವಿದ್ದು, ಸಮಾಧಿಯ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡ ಕ್ರಮವೇನು; | ಕೆಂಪಾಪುರದಲ್ಲಿರುವ ಕೆಂಪೇಗೌಡರ ವೀರ ಸಮಾಧಿಯ ಅಭಿವೃದ್ಧಿ ಯೋಜನೆಗೆ 4 ಎಕರೆ 36 ½ ಗುಂಟೆ ಮತ್ತು ಗ್ರಾಮಠಾಣಾ ಖಾಲಿ ನಿವೇಶನ/ಮನೆ 48,704 ಚ.ಅ ವಿಸ್ತೀರ್ಣದ ಜಾಗವನ್ನು ಈಗಾಗಲೇ ಭೂಸ್ವಾಧೀನಪಡಿಸಿಕೊಳ್ಳಲಾಗಿದ್ದು, ಅಂದಾಜು 10 ಎಕರೆ ಉಳಿಕೆ ಜಾಗವನ್ನು ಸಹ ಭೂಸ್ವಾಧೀನಪಡಿಸಿಕೊಳ್ಳುವ ಕುರಿತು ಪರಿಶೀಲಿಸಲಾಗುತ್ತಿದೆ, ಒಟ್ಟಾರೆಯಾಗಿ ಕೆಂಪೇಗೌಡರ ವೀರ ಸಮಾಧಿಯನ್ನು ಅಭಿವೃದ್ಧಿಪಡಿಸಲು ಹಂತ ಹಂತವಾಗಿ ಕ್ರಮವಹಿಸಲಾಗುವುದು. |
| **ಆ)** | ಇದನ್ನು ಅಭಿವೃದ್ಧಿ ಪಡಿಸದಿರಲು ಇರುವ ಅಡಚಣೆಗಳೇನು; | ಅನುದಾನದ ಕೊರತೆ ಇರುತ್ತದೆ. ಇದಕ್ಕಾಗಿ ತಗಲುವ ವೆಚ್ಚವನ್ನು ನಗರಾಭಿವೃದ್ಧಿ ಇಲಾಖೆಯಡಿ ಬರುವ ಇತರೆ ಪ್ರಾಧಿಕಾರ / ಮಂಡಳಿ / ನಿಗಮಗಳಾದ ಬಿ.ಬಿ.ಎಂ.ಪಿ, ಬಿ.ಡಿ.ಎ, ಬಿ.ಎಂ.ಆರ್.ಡಿ.ಎ ಬಳಿ ಇರುವ ಅನುದಾನದಲ್ಲಿ ಪ್ರಾಧಿಕಾರಕ್ಕೆ ಅನುದಾನವನ್ನು ಕೋರಲು ಕ್ರಮ ವಹಿಸಲಾಗುವುದು. |
| **ಇ)** | ಅಭಿವೃದ್ಧಿ ಕಾಮಗಾರಿ ಪ್ರಾರಂಭಿಸಿದ್ದಲ್ಲಿ , ಪ್ರಸ್ತುತ ಯಾವ ಹಂತದಲ್ಲಿದೆ? (ವಿವರ ಒದಗಿಸುವುದು) | ಅನ್ವಯಿಸುವುದಿಲ್ಲ. |

ಸಂಖ್ಯೆ: ಇ-ಕಂಇ 193 ಆರ್‌ಬಿಎ 2023

**(ಕೃಷ್ಣ ಬೈರೇಗೌಡ)**
**ಕಂದಾಯ ಸಚಿವರು**